**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**- 180/2023 **DW** -1

**ದಿಃ 03.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪ್ರಾಥಮಿಕ ವಿವಾದಾಂಶದ ಮೇಲಿನ ಮುಖ್ಯ ವಿಚಾರಣೆಃ ಪ್ರತಿವಾದಿ ನಂಬರ 1 ಪರ ಶ್ರೀ ಬಿಎಸ ರವರಿಂದ ಜಿಎಸಎಂ ಪರವಾಗಿ**

ನಾನು ಈ ದಾವೆಯಲ್ಲಿ ಪ್ರತಿವಾದಿ ನಂಬರ 1 ಆಗಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದು.

ನಾನು ನನ್ನ ವಿಚಾರಣೆಗೆ ಸಂಬಂಧಿಸಿದಂತೆ ಅಸಲು ದಾವಾ ಸಂಖ್ಯೆ 129/2007 ರ ದಾವಾ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಶಾನೆ ಡಿ 1 ಎಂದು ಹಾಗೂ ಪ್ರತಿವಾದಿ 1ರವರು ಸಲ್ಲಿಸಿರುವ ಲಿಖಿತ ತಕರಾರಿನ ದೃಢೀಕೃತ ನಕಲನ್ನು ನಿಶಾನೆ ಡಿ 2 ಎಂದು, ಪ್ರತಿವಾದಿ ನಂಬರ 3 ರವರು ಸಲ್ಲಿಸಿರುವ ತಕರಾರಿನ ದೃಢೀಕೃತ ನಕಲನ್ನು ನಿಶಾನೆ ಡಿ 3 ಎಂದು, ವಿವಾದಾಂಶಗಳ ದೃಢೀಕೃತ ನಕಲನ್ನು ನಿಶಾನೆ ಡಿ 4 ಎಂದು, ಅಸಲು ದಾವಾ ಸಂಖ್ಯೆ 129/2007 ರ ತೀರ್ಪಿನ ದೃಢೀಕೃತ ನಕಲನ್ನು ನಿಶಾನೆ ಡಿ 5 ಎಂದು ಹಾಗೂ ಡಿಕ್ರಿಯ ದೃಢೀಕೃತ ನಕಲನ್ನು ನಿಶಾನೆ ಡಿ 6 ಎಂದು, ಪ್ರತಿವಾದಿ ನಂಬರ 2 ರವರು ಸಲ್ಲಿಸಿರುವ ಮೆಮೊದ ದೃಢೀಕೃತ ನಕಲನ್ನು ನಿಶಾನೆ ಡಿ 7 ಎಂದು ಗುರ್ತಿಸಲಾಯಿತು.

**(ಈ ಹಂತದಲ್ಲಿ ವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಿ ಮುಂದುಡಲಾಯಿತು.)**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ